ಶ್ರೀ ಜಿ. ಪುಟ್ಟಸ್ವಾಮೀಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ವಸ್ತುನಿಷ್ಠವಾಗಿ ನನ್ನ ಗಮನವನ್ನು ಸೆಳೆಯುವ ಮೂಲಕ ನನ್ನ ಕರ್ತವ್ಯವನ್ನು ಹೇಳಿದ್ದಾರೆ. ನಾವಂತೂ ನೀರಾವರಿ ಕ್ಷೇತ್ರದಲ್ಲಿ ಪಕ್ಷಪಾತ ಧೋರಣೆ ತೋರುವುದಿಲ್ಲವೆಂಬ ಉತ್ತರ ಕೊಡುವ ಜೊತೆಗೆ ನಮ್ಮ ಹಣಕಾಸಿನ ಸ್ಥಿತಿ ಕೂಡಾ ಬಹಳ ದುಸ್ಥಿತಿಯಲ್ಲಿದೆ, ಆದರೂ ಈ ಕೆಲಸವಂತೂ ಆಗಲೇಬೇಕು. ಇದು ನೀರಾವರಿಯ ಪ್ರಶ್ನೆ ಇದೆ, ಇದು ರೈತನ ಪ್ರಶ್ನೆ. ರಾಜ್ಯದ ನೀರಿನ ಪ್ರಶ್ನೆ. ಇದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆಂದು ಹೇಳುತ್ತೇನೆ.

ಗುಲ್ಬರ್ಗಾ ಕಾರ್ಯನಿರ್ವಾಹಕ ಅಭಿಯಂತರರು ಕೈಗೊಂಡ ಕಾಮಗಾರಿಗಳಿಗೆ ಬಿಡುಗಡೆಯಾದ ಹಣ

(೬೯. ಶ್ರೀ ಶಿವಶೇಖರಪ್ಪ ಗೌಡ (ಶಹಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಪಾಲರ ಆಡಳಿತದಲ್ಲಿ ಗುಲ್ಬರ್ಗ ಕಾರ್ಯನಿರ್ವಾಹಕ ಅಭಿಯಂತರರು ಕೈಕೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಿಂದಿನ ಬಾಕಿ ಹಣ ಪ್ರಾಪ್ತಿಗಾಗಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಸರಕಾರದವರು ಬಿಡುಗಡೆ ಮಾಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಹಿಂದಿನ ಯಾವ ಯಾವ ಕಾಮಗಾರಿಗಳ ಬಗ್ಗೆ ಹಣ ಬಿಡುಗಡೆ ಮಾಡಲಾಗಿದೆ ಮತ್ತು ಗುಲ್ಬರ್ಗ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲಾಗಿತ್ತು ?

ಇ) ಪ್ರತಿ ತಾಲ್ಲೂಕಿಗೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ರಾಜ್ಯಪಾಲರ ಆಡಳಿತದ ಅವಧಿಯಲ್ಲಿ ಹಿಂದಿನ ಬಾಕಿಬಿಲ್ಲುಗಳ ಪ್ರಾಪ್ತಿಗಾಗಿ ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಗುಲ್ಬರ್ಗ ವಿಭಾಗಕ್ಕೆ ೧೦೩.೨೪ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು.

ಆ) ಮತ್ತು ಇ)

೧) ಈ ಕೆಳಕಂಡ ಕಾಮಗಾರಿಗಳ ಬಗ್ಗೆ ಹಣ ಬಿಡುಗಡೆ ಮಾಡಲಾಗಿತ್ತು.

೧) ಚಿಕ್ಕ ಕಟ್ಟಡಗಳ ನಿರ್ಮಾಣ

೨) ಬೃಹತ್ ಕಟ್ಟಡಗಳ ನಿರ್ಮಾಣ

೩) ವಿವಿಧ ಕಟ್ಟಡಗಳ ಹಾಗೂ ವಿವಿಧ ನಿವಾಸ ಗೃಹಗಳ ನಿರ್ವಹಣೆ ಮತ್ತು ದುರಸ್ತಿ.

೪) ರಸ್ತೆಗಳ ಡಾಂಬರೀಕರಣ.

೫) ಬೃಹತ್ ಸೇತುವೆಗಳ ನಿರ್ಮಾಣ

೬) ವಿವಿಧ ರಸ್ತೆಗಳ ವಿಶೇಷ ದುರಸ್ತಿಗಳು

೭) ಅತೀ ವೃಷ್ಟಿಯಿಂದ ಹಾನಿಗೀಡಾದ ವಿವಿಧ ರಸ್ತೆಗಳ ದುರಸ್ತಿಗಳು

೨) ಗುಲ್ಬರ್ಗಾ ಜಿಲ್ಲೆಯ ಕೆಳಕಂಡ ತಾಲ್ಲೂಕ್‌ಗಳಲ್ಲಿ ಕೆಲಸಗಳನ್ನು ತೆಗೆದುಕೆ ಳಳ್ಳಲಾಗಿತ್ತು. ಪ್ರತಿ ತಾಲ್ಲೂಕಿನಲ್ಲಿ ಮಾಡಿರುವ ಖರ್ಚಿನ ವಿವರವನ್ನು ಕೊಡಲಾಗಿದೆ.

ಕ್ರಮ ಸಂಖ್ಯೆ	ತಾಲ್ಲೂಕುಗಳು	ಖರ್ಚು ಮಾಡಿರುವ ಮೊತ್ತ (ಲಕ್ಷ ರೂ.ಗಳಲ್ಲಿ)
೧)	ಶಹಾಪೂರ	೩.೭೫೫
೨)	ಶೋರಾಪುರ	೪.೫೦೨
೩)	ಚಿಂಚೋಳಿ	೬.೯೮೩
೪)	ಸೇಡಂ	೪.೪೧೩
೫)	ಆಳಂದ	೧೬.೨೬೫
೬)	ಅಫಜಲ್‌ಪೂರ	೯.೨೪೪
೭)	ಯಾದಗಿರಿ	೯.೫೩೮
೮)	ಚಿತಾಪೂರ	೭.೧೫೦
೯)	ಗುಲ್ಬರ್ಗಾ	೩೧.೧೯೪
೧೦)	ಜೇವರ್ಗಿ	೧೦.೧೯೨
	ಒಟ್ಟು	೧೦೩.೨೪೦

ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದಂತೆ ಹೋದ ವರ್ಷ ನಮ್ಮಲ್ಲಿ ಮಳೆ ಜಾಸ್ತಿಯಾಗಿತ್ತು. ಸಾಕಷ್ಟು ರಸ್ತೆ ರಿಪೇರಿ ಕೆಲಸವನ್ನು ತೆಗೆದುಕೊಳ್ಳ ಬೇಕೆಂದು ನಾವು ಎಲ್ಲಾ ಹೇಳಿದ್ದೇವೆ. ಆದರೆ ನಮ್ಮಲ್ಲಿ ಹಣವಿಲ್ಲ. ನಾವು ಕೆಲಸ ಮಾಡುವುದಿಲ್ಲ ವೆಂದು ಅಧಿಕಾರಿಗಳು ಹೇಳುತ್ತಾ ಹೋದರು. ೧ ಕೋಟಿ ರೂಪಾಯಿ ೩ ಲಕ್ಷ ಹಣ ಬಿಡುಗಡೆ ಯಾದ್ಮೇಲೆ, ಆ ಹಣವನ್ನು ಪೆಂಡಿಂಗ್ ಇರುವ ಬಿಲ್ಲನ್ನು ಕ್ಲಿಯರ್ ಮಾಡಲಾಗಿದೆಯೆಂದು ತೋರಿಸ ಲಾಗಿದೆ. ನಮ್ಮ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ೩ಲಕ್ಷ, ೧೬ ಲಕ್ಷ ೩೧ ಲಕ್ಷ ಈ ರೀತಿ ಕೆಲಸ ಮಾಡಿದ್ದೇವೆಂದು ಹಣ ತೆಗೆದುಕೊಂಡಿದ್ದಾರೆ. ನನಗೆ ತಿಳಿದಹಾಗೆ ಈ ಕೆಲಸ ಆಗಿಲ್ಲವೆಂದು ನನ್ನ ಭಾವನೆಗೆ ಬಂದಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿ ?

ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೆಲಸ ಮಾಡಿದ್ದೇ ವೆಂದು ಹಣವನ್ನು ತೆಗೆದುಕೊಂಡಿದ್ದಾರೆ. ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹಣವನ್ನು ತೆಗೆದುಕೊಂಡಿದ್ದಾರೆಂದು ನಾನು ಪ್ರಶ್ನೆಯನ್ನು ಕೇಳಿದ್ದಕ್ಕೆ ಇಂಥಿಂಥ ತಾಲ್ಲೂಕಿನಲ್ಲಿ ಇಂಥಿಂಥ ಕೆಲಸ ಕಾರ್ಯಗಳನ್ನು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಯಾವ್ಯಾವ ತಾಲ್ಲೂಕಿನಲ್ಲಿ ಯಾವ್ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ ಆ ವಿವರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಎಂ. ವಂಟ್ಲಿಕಾರ್ಜುನ ಖಿರ್ಗೆ.—ಸರ್ಕಾರದಿಂದ ೧ ಕೋಟಿ ೩ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆದನ್ನು ಪೆಂಡಿಂಗ್ ಬಿಲ್ಸ್ ಕ್ಲಿಯರ್ ಮಾಡುವುದಕ್ಕೆ ತೆಗೆದುಕೊಂಡಿ ದ್ದಾರೆ. ರಾಜ್ಯಪಾಲರ ಆಡಳಿತದ ಕಾಲದಲ್ಲಿ ಈ ಹಣವನ್ನು ತೆಗೆದುಕೊಂಡಿದ್ದಾರೆ; ಕೆಲಸ ಆಗದಿದ್ದರೂ ಕೂಡ ಫಾಲ್ಸ್ ರಿಕಾರ್ಡ್ಸ್ ಮಾಡಿ ಹಣವನ್ನು ತೆಗೆದುಕೊಂಡಿದ್ದಾರೆನ್ನುವ ಸಂಶಯ ವನ್ನು ಮಾನ್ಯ ಸದಸ್ಯರು ವ್ಯಕ್ತಮಾಡುತ್ತಿದ್ದಾರೆ. ಫ್ಲಡ್ ರಿಲೀಫ್ ವರ್ಕ್ಸ್‌ಗೆ ಕೊಡಲಾಗಿದೆಯೆಂದು ಹಣವನ್ನು ತೆಗೆದುಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚು ಮಳೆ ಬಂದಿರುವುದು ಆಳಂದ್, ಯಾದಗಿರಿ, ಸೇಡಂ ತಾಲ್ಲೂಕುಗಳಲ್ಲಿ ಅಲ್ಲಿಗೆ ಹೆಚ್ಚಿಗೆ ಹಣವನ್ನಿ ಬಿಡುಗಡೆ ಮಾಡಿಲ್ಲ. ಗುಲ್ಬರ್ಗ ಸಿಟಿಗೆ ೩೧ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅಲ್ಲಿ ಮಳೆಯೇ ಬಂದಿಲ್ಲ. ಎಲ್ಲಿ ಮಳೆ ಬಂದು

ಡ್ಯಾಮೇಜ್ ಆಗಿಲ್ಲ ಅಂತಹ ಸಬ್ ಡಿವಿಜನ್‌ಗಳಲ್ಲಿ ೧೦ಲಕ್ಷ ರೂಪಾಯಿಗಳನ್ನು ಬಿಲ್ ಮಾಡಿ ತೆಗೆದುಕೊಂಡಿದ್ದಾರೆ; ಕೆಲಸ ಆಗದೆ ಇಂಜಿನಿಯರ್‌ಗಳು ಬಿಲ್ ಮಾಡಿ ಅವರೇ ಹಣವನ್ನು ತೆಗೆದುಕೊಂಡಿದ್ದಾರೆನ್ನುವ ಆಪಾದನೆಯನ್ನು ಅವರು ಮಾಡುತ್ತಿದ್ದಾರೆ. ಅಲ್ಲಿ ಸ್ಪಷ್ಟವಾಗಿ ಕೆಲಸ ಆಗಿದೆಯೇ ಕೆಲಸ ಆಗದಿದ್ದರೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇದನ್ನು ಪುನಃ ಲೋಕಾಯುಕ್ತಕ್ಕೆ ಕಳುಹಿಸಿ ಎನ್‌ಕ್ವಾಯರಿ ಮಾಡಿಸುತ್ತೀರಾ ಹೇಗೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಗುರುತರವಾದ ಆಪಾದನೆಗಳು ಬಂದರೆ ಲೋಕಾಯುಕ್ತಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರು ಹೇಳುತ್ತಿದ್ದಾರೆ, ಮತ್ತಾರು ಹೇಳಬೇಕು ? ಎಲ್ಲರೂ ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೨೨-೩-೯೦ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮತ್ತು ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ

೯೮. ಶ್ರೀ ಜಿ. ರಾಜೂಗೌಡ(ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಮಿಳುನಾಡಿನ ರೈತರ ಬೆಳೆ ರಕ್ಷಿಸಲು ಯಾವ ಷರತ್ತುಗಳ ಮೇಲೆ ಕಾವೇರಿ ನೀರನ್ನು ಬಿಡಲಾಗುತ್ತಿದೆ.

ಆ) ೧೯೮೭ರಿಂದ ಇಲ್ಲಿಯವರೆಗೆ ಎಷ್ಟು ಟಿ. ಎಂ. ಸಿ. ನೀರನ್ನು ಬಿಡಲಾಗಿದೆ.

ಇ) ಇದಕ್ಕಾಗಿ ನೀವು ಪಡೆದಿರುವ ಪ್ರತ್ಯುಪಕಾರವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕರ್ನಾಟಕದಿಂದ ಬಿಡುಗಡೆ ಮಾಡಿದ ಕಾವೇರಿ ನೀರಿನ ಬದಲು ತಮಿಳುನಾಡಿನಿಂದ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಷರತ್ತಿನ ಮೇಲೆ ಹಾಗೂ ಅಕ್ಕ ಪಕ್ಕದ ರಾಜ್ಯಗಳ ಸೌಹಾರ್ದಯುತ ಸಂಬಂಧ ಹೊಂದಿರಬೇಕೆಂಬ ನಿಲುವಿನಿಂದ ಬಿಡಲಾಗುತ್ತಿದೆ.

ಆ) ೩೦.೬೧ ಟಿಎಂಸಿ

ಇ) ಈವರೆಗೆ ತಮಿಳುನಾಡು ೧೭೭.೫೪೮ ಮಿ. ಯೂನಿಟ್ ವಿದ್ಯುಚ್ಛಕ್ತಿಯನ್ನು ಒದಗಿಸಿದೆ. ಇನ್ನೂ ಕೊಡಬೇಕಾಗಿರುವ ವಿದ್ಯುಚ್ಛಕ್ತಿಯ ಬಗ್ಗೆ ವ್ಯವಹರಿಸಲಾಗುತ್ತಿದೆ.

ಕೃಷ್ಣಾ ಹಾಗೂ ಕಾವೇರಿ ನೀರಿನ ಪೂರ್ಣ ಬಳಕೆ

೯೯. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಹಾಗೂ ಕಾವೇರಿ ನೀರನ್ನು ಪೂರ್ಣವಾಗಿ ಬಳಕೆ ಮಾಡಲು ಸರ್ಕಾರವು ಏನಾದರೂ ಯೋಜನೆ ರೂಪಿಸಿದೆಯೆ:

ಆ) ಹಾಗಿದ್ದಲ್ಲಿ ಅಂತಹ ಯೋಜನೆಯ ಸ್ವರೂಪ ಯೋಜನೆಯ ಗಾತ್ರ ಹಾಗೂ ಕಾರ್ಯಗತ ಮಾಡಲು ಕೈಕೊಂಡಿರುವ ಕ್ರಮಗಳೇನು?